## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 1309 ಗ್ರಾಪಂಅ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:10-06-2020.

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.

ಮಾನ್ಯರೆ,

ವಿಷಯ: ಗ್ರಾಮ ಪಂಚಾಯತಿಗಳು ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ರಚಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 1309 ಗ್ರಾಪಂಅ 2017 ದಿನಾಂಕ:17-01-2020.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಗ್ರಾಮ ಪಂಚಾಯಿತಿಗಳ (ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ) (ಮಾದರಿ) ಉಪವಿಧಿಗಳು 2019ನ್ನು ದಿನಾಂಕ:17.01.2020 ರಂದು ಪ್ರಕಟಿಸಿ ದಿನಾಂಕ:05.03.2020 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. (ಪ್ರತಿ ಲಗತ್ತಿಸಿದೆ) ಸದರಿ ಉಪವಿಧಿಗಳಂತೆ ಗ್ರಾಮ ಪಂಚಾಯತಿಗಳು ಕೆರೆ ಅಭಿವೃದ್ಧಿ ನಿರ್ವಹಣಾ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳುವಂತೆ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

B. Naveenkumar 10/6/2020
(ಬಿ. ನವೀನ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, (ಗ್ರಾ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
10/6/2020

<u>**ಪ್ರತಿ: ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.**</u>

1) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
2) ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

ಎ ಪಿ ಸಿ ಟಿ

35

the students of the regular courses have completed their courses and they have been awarded degrees, diplomas or awards, as the case may be.

(5) After having corrected the mis-management or awarded the degrees, diplomas or awards, as the case may be, to the last batches of students of the regular courses, the administrator shall make a report to the Government.

(6) On receipt of the report under sub-section (5), the Government shall, by notification in the official Gazette, issue a final order dissolving the University and from the date of publication of such notification, the University shall stand dissolved and all the assets and liabilities of the University shall vest in the Sponsoring Body from such date.

(7) It shall be competent for the Government to take action as per the provisions of the Act on such dissolution and run the university in the public interest and in the interest of the students till the students are provided all facilities to complete their courses and get their degrees or diplomas.

By Order and in the name of
Governor of Karnataka

**(MAHESH R)**
Under Secretary to Government
Higher Education Department (Universities-2)

**PR-77**

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 1309 ಗ್ರಾಪಂಅ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:17-01-2020.

## ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣ 61(ಎ) ಓದಿಕೊಂಡಂತೆ ಪ್ರಕರಣ 316 ರಲ್ಲಿ ಅಗತ್ಯಪಡಿಸಲಾದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಗ್ರಾಮ ಪಂಚಾಯತಿಗಳ (ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ) (ಮಾದರಿ) ಉಪವಿಧಿಗಳು, 2019 ಕರಡನ್ನು ದಿನಾಂಕ:22-07-2019 ರ ಕರ್ನಾಟಕ ರಾಜ್ಯ ಪತ್ರದ ಭಾಗ-IV-A ರಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಲ್ಲಿಸಬೇಕೆಂದು ಕೋರಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ:22-07-2019 ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಬಾರದಿರುವುದರಿಂದ;

ಈಗ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಪ್ರಕರಣ 61(ಎ) ರೊಡನೆ ಓದಿಕೊಂಡಂತೆ ಪ್ರಕರಣ 316 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಮಾದರಿ ಉಪವಿಧಿಗಳನ್ನು ರಚಿಸುತ್ತದೆ, ಎಂದರೆ;-

## ಮಾದರಿ ಉಪವಿಧಿಗಳು

## ಅಧ್ಯಾಯ-1

### 1. ಹೆಸರು ಮತ್ತು ಪ್ರಾರಂಭ :

(ಎ) ಈ ಉಪವಿಧಿಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಗ್ರಾಮ ಪಂಚಾಯತಿಗಳ (ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ) (ಮಾದರಿ) ಉಪವಿಧಿಗಳು, 2019 ಎಂದು ಕರೆಯತಕ್ಕದ್ದು.

(ಬಿ) ಈ ಉಪವಿಧಿಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

### 2. ಪರಿಭಾಷೆಗಳು:

ಈ ಉಪವಿಧಿಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಈ ಮುಂದಿನ ಪದಗಳು ಮತ್ತು ಪದಾವಳಿಗಳನ್ನು ಈ ಮುಂದಿನ ಅರ್ಥಗಳಲ್ಲಿ ಬಳಸಲಾಗಿದೆ:

i. "ವಿಧಿ": ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 61-ಎ ಹಾಗೂ ಅದಕ್ಕೆ ಕಾಲಕಾಲದಲ್ಲಿ ತಂದಿರುವ ಯಾವುದೇ ಬದಲಾವಣೆಗಳು ಅನ್ವಯಸುತ್ತವೆ.

ii. "ಸ್ಥಾಯಿ ಸಮಿತಿ" ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 61 (ii) ರಡಿ ರಚಿತವಾದ ಸ್ಥಾಯಿ ಸಮಿತಿ ಎಂದು ತಿಳಿಯತಕ್ಕದ್ದು.

iii. "ನೀರಾವರಿ ಕಾಯ್ದೆ": ಎಂದರೆ ಕರ್ನಾಟಕ ನೀರಾವರಿ ಕಾಯ್ದೆ 1965 ಮತ್ತು ಅದಕ್ಕೆ ಆಗಿಂದಾಗ್ಗೆ ತಂದಿರುವ/ತರಲಾಗುವ ತಿದ್ದುಪಡಿಗಳು.

iv. "ಗ್ರಾಮ": ಎಂದರೆ ಕೆರೆಯ ವ್ಯಾಪ್ತಿಯಲ್ಲಿ ಬರುವ ವಸತಿ ಪ್ರದೇಶ ಎಂದು ತಿಳಿಯತಕ್ಕದ್ದು.

v. "ಸಮಿತಿ" ಎಂದರೆ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ.

vi. "ಅಧ್ಯಕ್ಷರು": ಎಂದರೆ ಕೆರೆಯ ನಿರ್ವಹಣೆ ಮತ್ತು ಅಭಿವೃದ್ಧಿ ಸಮಿತಿಯ ಸದಸ್ಯರಿಂದ ಉಪವಿಧಿಗಳ ಪ್ರಕಾರ ಒಂದು ಕಾಲಾವಧಿಗೆ ನೇಮಿಸಲ್ಪಡುವ ಪದಾಧಿಕಾರಿ.

vii. "ಉಪಾಧ್ಯಕ್ಷರು": ಎಂದರೆ ಕೆರೆಯ ನಿರ್ವಹಣೆ ಮತ್ತು ಅಭಿವೃದ್ಧಿ ಸಮಿತಿಯ ಸದಸ್ಯರಿಂದ ಉಪವಿಧಿಗಳ ಪ್ರಕಾರ ಒಂದು ಕಾಲಾವಧಿಗೆ ನೇಮಿಸಲ್ಪಡುವ ಪದಾಧಿಕಾರಿ.

viii. "ಸಭೆ": ಎಂದರೆ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ಸಭೆಗಳು ಎಂದು ತಿಳಿಯತಕ್ಕದ್ದು.

ix. "ಸಾಧಾರಣ ಬಹುಮತ": ಎಂದರೆ ಹಾಜರಿದ್ದ ಸದಸ್ಯರ ಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಸದಸ್ಯರ ಒಪ್ಪಿಗೆ.

x. "ವರ್ಷ": ಎಂದರೆ ಚಾಲನೆಯಲ್ಲಿರುವ ಹಣಕಾಸು ವರ್ಷ, ಅಂದರೆ ಏಪ್ರಿಲ್ 1 ರಿಂದ ಮಾರ್ಚ್ 31.

155



xi. **"ಭೂ ಅಭಿವೃದ್ಧಿ"**: ಎಂದರೆ ಹೊಲಗಳಿಗೆ ಸಮನಾಗಿ ನೀರನ್ನು ವಿತರಣೆ ಮಾಡಲು ರೂಪಿಸಿ ನಿರ್ಮಿಸಿದ ಹೊಲಗಾಲುವೆ/ಬಸಿಗಾಲುವೆ/ಸಮಪಾತಳಿ/ಒಡ್ಡುಗಳು/ನಿಯಂತ್ರಕಗಳು (ರೆಗ್ಯುಲೇಟರ್ಸ್) ಮತ್ತು ಇತರೆ ಕೆಲಸಗಳು.

xii. **"ವಾರಾಬಂದಿ ಪದ್ಧತಿ"**: ಎಂದರೆ, ತೂಬುಗಳಿಂದ ನೀರನ್ನು ಸರದಿಯ ಮೇಲೆ ಹಾಗೂ ಸಮಾನತೆ ಆಧಾರದ ಮೇಲೆ ಹಂಚಿಕೊಳ್ಳುವ ಪದ್ಧತಿ.

**ಶಬ್ದಗಳ ಬಳಕೆ:**

i. ಇಲ್ಲಿ ಬಳಕೆಯಾಗಿರುವ ಏಕವಚನದಲ್ಲಿರುವ ಪದಗಳನ್ನು ಬಹುವಚನದಲ್ಲಿಯೂ, ಬಹುವಚನದಲ್ಲಿರುವ ಪದಗಳನ್ನು ಏಕವಚನದಲ್ಲಿ ಉಲ್ಲೇಖಿಸಬಹುದಾಗಿರುತ್ತದೆ.

ii. ಇಲ್ಲಿ ಬಳಕೆಯಾಗಿರುವ ಪುರುಷ ವಾಚಕಗಳನ್ನು ಸ್ತ್ರೀ ವಾಚಕಗಳನ್ನಾಗಿಯೂ, ಸ್ತ್ರೀ ವಾಚಕಗಳನ್ನು ಪುರಷ ವಾಚಕಗಳನ್ನಾಗಿಯೂ ಅರ್ಥೈಸಿಕೊಳ್ಳಬಹುದಾಗಿರುತ್ತದೆ.

## ಅಧ್ಯಾಯ–2

### 3) ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ರಚನೆ,–

i) ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯನ್ನು ಕೆಳಗಿನಂತೆ ರಚಿಸತಕ್ಕದ್ದು.

1) ಕೆರೆ ವ್ಯಾಪ್ತಿಯಲ್ಲಿ ಬರುವ ಇಬ್ಬರು ಗ್ರಾಮ ಪಂಚಾಯತಿ ಸದಸ್ಯರು.
2) ಕೆರೆ ಬಳಕೆದಾರರ ಪ್ರತಿನಿಧಿಗಳು,–
   - ಜಲಾನಯನ ಪ್ರದೇಶದ ರೈತರು–1.
   - ಅಚ್ಚುಕಟ್ಟು ಪ್ರದೇಶದ ರೈತರು–1.
3) ಅಚ್ಚುಕಟ್ಟಿನ ಕೊನೆ ಹಂತದ ರೈತರು–1.
4) ಕೂಲಿಕಾರ್ಮಿಕರು–1.
5) ಕುಶಲ ಕರ್ಮಿಗಳು–1.
6) ಪರೋಕ್ಷವಾಗಿ ಉಪಯೋಗ ಪಡೆಯುವವರು–1.
7) ಸ್ಥಳೀಯ ಸ್ವಯಂ ಸೇವಾ ಸಂಘ ಪದಾಧಿಕಾರಿ/ಗ್ರಾಮದಲ್ಲಿ ವಾಸಿಸುವ ತಜ್ಞರು–1.
8) ಕೆರೆ ಅಭಿವೃದ್ಧಿಗೆ ರೂ.ಒಂದು ಲಕ್ಷವನ್ನು ನಗದಾಗಿ ಅಥವಾ ಇತರೇ ರೂಪದಲ್ಲಿ ದಾನ ನೀಡಿದ ದಾನಿಗಳು.
9) ಗ್ರಾಮ ಪಂಚಾಯತಿ ಕಾರ್ಯದರ್ಶಿ–ಸಮಿತಿಯ' ಕಾರ್ಯದರ್ಶಿಯಾಗಿರುತ್ತಾರೆ.
10) ಕ್ರಮ ಸಂಖ್ಯೆ 1 ರಿಂದ 7ರವರೆಗಿನ ಸದಸ್ಯರನ್ನು, ಈ ಉದ್ದೇಶಕ್ಕಾಗಿ ಕರೆದ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುವುದು.

ii) ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯದರ್ಶಿ ಸೇರಿ ಕನಿಷ್ಠ 9 ಮತ್ತು ಗರಿಷ್ಠ 14 ಜನ ಸದಸ್ಯರು ಇರುವುದು.

iii) ಸಮಿತಿಯಲ್ಲಿ ಕನಿಷ್ಠ ಇಬ್ಬರು ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡಗಳಿಗೆ ಸೇರಿದ ಸದಸ್ಯರು ಇರತಕ್ಕದ್ದು.

iv) ಸಮಿತಿಯ ಒಟ್ಟು ಸದಸ್ಯರಲ್ಲಿ ಕನಿಷ್ಠ ಮೂರನೇ ಒಂದರಷ್ಟು ಮಹಿಳಾ ಸದಸ್ಯರು ಇರತಕ್ಕದ್ದು.

v) ಅಧ್ಯಕ್ಷ ಅಥವಾ ಉಪಾಧ್ಯಕ್ಷರು ಈ ಇಬ್ಬರಲ್ಲಿ ಒಬ್ಬರು ಮಹಿಳೆಯಾಗಿರಬೇಕು.

vi) ಸಮಿತಿಯ ಸದಸ್ಯರ ಅವಧಿಯು ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರ ಪದಾವಧಿಯು ಮೂರು ವರ್ಷ ಆಗಿರುತ್ತದೆ.

vii) ಸಮಿತಿಯ ಕಾರ್ಯದರ್ಶಿ ಆಗಿರುವವರು ಸಂಘದ ಮುಖ್ಯ ಕಾರ್ಯನಿರ್ವಾಹಕರು ಆಗಿರುತ್ತಾರೆ.

viii) ಸಮಿತಿಯ ಎಲ್ಲಾ ಪದಾಧಿಕಾರಿಗಳು ನಿವೃತ್ತಿ ಹೊಂದ ಬಯಸಿದಲ್ಲಿ ವಿಶೇಷ ಗ್ರಾಮ ಸಭೆಯ ಮೂಲಕ ಹೊಸ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯನ್ನು ನಿಯಮಿಸಬಹುದಾಗಿರುತ್ತದೆ ಹಾಗೂ ಹೊಸ ಸಮಿತಿ ರಚನೆಯಾಗುವವರೆಗೂ ಪ್ರಸ್ತುತ ಸಮಿತಿಯು ಮುಂದುವರೆಯುವುದು.

ix) ಸಮಿತಿಯ ಸಭೆಗಳಲ್ಲಿ ತೀರ್ಮಾನಿಸುವ ಎಲ್ಲಾ ಕಾರ್ಯಕ್ರಮಗಳು, ತೀರ್ಮಾನಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಕಾರ್ಯದರ್ಶಿಯದಾಗಿರುತ್ತದೆ.

## ಅಧ್ಯಾಯ-3

### 4. ಸಮಿತಿಯ ಪದಾಧಿಕಾರಿಗಳು:

ಅ) ಅಧ್ಯಾಯ-2 ರ (3) (i)ರಲ್ಲಿ ಸೂಚಿಸಿರುವ ಸದಸ್ಯರುಗಳ ಪೈಕಿ ಒಬ್ಬ ಅಧ್ಯಕ್ಷ ಮತ್ತು ಒಬ್ಬ ಉಪಾಧ್ಯಕ್ಷರನ್ನು ಸಮಿತಿಯ ಸಭೆಯಲ್ಲಿ ಆಯ್ಕೆ ಮಾಡತಕ್ಕದ್ದು, ಇದರಲ್ಲಿ ಕನಿಷ್ಠಪಕ್ಷ ಒಬ್ಬರು ಮಹಿಳೆಯಾಗಿರತಕ್ಕದ್ದು.

ಆ) ಸಂಬಂಧಿಸಿದ ಗ್ರಾಮ ಪಂಚಾಯತಿ ಕಾರ್ಯದರ್ಶಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿ ನೇಮಿಸತಕ್ಕದ್ದು.

ಇ) ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಮೂರು ವರ್ಷಗಳ ಅವಧಿಗೆ ಅಥವಾ ಅವನ / ಅವಳ ಸದಸ್ಯತ್ವ ರದ್ದಾಗುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಧಿಕಾರವನ್ನು ಹೊಂದಿರತಕ್ಕದ್ದು.

### 5. ಅಧ್ಯಕ್ಷರ ಕರ್ತವ್ಯಗಳು:

ಅ) ಅಧ್ಯಕ್ಷರು ಈ ಮುಂದಿನ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

i. ಸಮಿತಿಯ ಎಲ್ಲಾ ಸಭೆಗಳ ಅಧ್ಯಕ್ಷತೆ ವಹಿಸುವುದು.
ii. ದೂರುಗಳ ಪೆಟ್ಟಿಗೆಯನ್ನು ಆ ಸಮಯದಲ್ಲಿ ಅಲ್ಲಿ ಲಭ್ಯವಿರುವ ಕನಿಷ್ಠ ಒಬ್ಬ ಸದಸ್ಯರ ಉಪಸ್ಥಿತಿಯಲ್ಲಿ ಕನಿಷ್ಠ ವಾರಕೊಮ್ಮೆ ತೆರೆಯುವುದು.

ಆ) ಅಧ್ಯಕ್ಷರು ಸಮಿತಿಯು ಮಾರ್ಗದರ್ಶನ ನೀಡುವಂತಹ ಇತರ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

### 6. ಉಪಾಧ್ಯಕ್ಷರ ಕರ್ತವ್ಯಗಳು:

ಅ) ಅಧ್ಯಕ್ಷರ ಗೈರುಹಾಜರಿಯಲ್ಲಿ, ಉಪಾಧ್ಯಕ್ಷರು ಈ ಉಪವಿಧಿಗಳ 5ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

ಆ) ಉಪಾಧ್ಯಕ್ಷರು ಸಮಿತಿಯು ಮಾಗದರ್ಶನ ನೀಡುವಂತಹ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

## 7. ಕಾರ್ಯದರ್ಶಿಯ ಕರ್ತವ್ಯಗಳು:

ಅ) ಕಾರ್ಯದರ್ಶಿಯು ಈ ಮುಂದಿನ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು;

i) ಸಮಿತಿಯ ಅನುಮೋದನೆ ಪಡೆದು ಕೆರೆಗಳ ವಾರ್ಷಿಕ ದುರಸ್ಥಿ, ಉಸ್ತುವಾರಿ ಹಾಗೂ ಕಾರ್ಯಾಚರಣೆಗಳ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವುದು.

ii) ಸಮಿತಿಯ ಸಭೆಗಳಿಗೆ ಕಾರ್ಯಸೂಚಿ ತಯಾರಿಸುವುದು.
ವಿವರಣೆ:- ಸಭೆಗಳ ಕಾರ್ಯಸೂಚಿಯು ಸಮಿತಿಯ ಮಾಸಿಕ ಲೆಕ್ಕಪತ್ರಗಳು, ಕೆರೆ ಉಸ್ತುವಾರಿ ಹಾಗೂ ಕಾರ್ಯಾಚರಣೆಗಳ ಕ್ರಿಯಾಯೋಜನೆಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿರತಕ್ಕದ್ದು.

iii) ಅಧ್ಯಾಯ-4 ರಲ್ಲಿ ವಿವರಿಸಿರುವಂತೆ ಸಮಿತಿಯ ಸಭೆ ಕರೆಯುವುದು ಮತ್ತು ಅದಕ್ಕೆ ಅನುಕೂಲ ಕಲ್ಪಿಸಿಕೊಡುವುದು ಮತ್ತು ಎಲ್ಲ ಸಭೆಗಳ ನಡಳಿಗಳನ್ನು ದಾಖಲಿಸುವುದು.

iv) ಸಮಿತಿಯ ಮಾಹಿತಿಗಾಗಿ ಆತನ /ಆಕೆಯ ಅಧಿಕಾರದ ಅಡಿಯಲ್ಲಿ ಬರುವ ಎಲ್ಲಾ ವಿಷಯಗಳ ಮಾಹಿತಿಯನ್ನು ತಯಾರಿಸುವುದು.

v) ಆತನ/ ಆಕೆಯ ಪ್ರಭಾರದಲ್ಲಿರುವ ಸಮಿತಿಗೆ ಸೇರಿದ ಎಲ್ಲಾ ದಸ್ತಾವೇಜುಗಳು ಮತ್ತು ಸ್ವತ್ತಿನ ಸುರಕ್ಷಿತ ಸುಪರ್ದಿಗೆ ಜವಾಬ್ದಾರರಾಗಿರುವುದು.

vi) ಸಮಿತಿಯ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ಇಟ್ಟುಕೊಳ್ಳುವುದು.

vii) ಕನಿಷ್ಠಪಕ್ಷ, ಪ್ರತಿ ಮೂರು ತಿಂಗಳುಗಳಿಗೊಮ್ಮೆ ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಗೆ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ಚಟುವಟಿಕೆಗಳ ವರದಿ ಮತ್ತು ಲೆಕ್ಕಪತ್ರಗಳ ವಿವರಪಟ್ಟಿಯನ್ನು ತಯಾರಿಸುವುದು ಹಾಗೂ ಹಾಜರುಪಡಿಸುವುದು.

viii) ಪತ್ರವ್ಯವಹಾರ ನಡೆಸುವುದು ಹಾಗೂ ಎಲ್ಲಾ ನೋಟೀಸುಗಳನ್ನು ಮತ್ತು ಜಾಹೀರಾತುಗಳನ್ನು ಹೊರಡಿಸುವುದು.

ಆ) ಸಮಿತಿಯು ಮಾರ್ಗದರ್ಶನ ನೀಡುವಂತ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

## 8. ಸಮಿತಿಯ ಅಧಿಕಾರಗಳು ಮತ್ತು ಜವಾಬ್ದಾರಿಗಳು:

**ಅಧಿಕಾರಗಳು:**

i. ಈ ಸಮಿತಿಯು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 58, 145, 184 ಹಾಗೂ ಅನುಸೂಚಿ-I, ಅನುಸೂಚಿ-II ಮತ್ತು ಅನುಸೂಚಿ-III ರಡಿ ಸಣ್ಣ ನೀರಾವರಿ, ಮೀನುಗಾರಿಕೆ ಹಾಗೂ ಕೃಷಿ ಆಧಾರಿತ ಚಟುವಟಿಕೆಗಳನ್ನು ನಿರ್ವಹಿಸಲು ಅಧಿಕಾರ ಹೊಂದಿರುತ್ತದೆ.

ii. ಕೆರೆಯ ವ್ಯಾಪ್ತಿಯಲ್ಲಿನ ನೀರಿನ ಮೂಲಗಳು ಮಲಿನಗೊಳ್ಳದಂತೆ ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ಜವಾಬ್ದಾರಿ, ಅಧಿಕಾರ ಸಮಿತಿಗಿದೆ. ಕೆರೆಗೆ ಚರಂಡಿ ನೀರನ್ನು ಹಾಯಿಸುವ, ಕಾರ್ಖಾನೆ ಕಲ್ಮಶಗಳನ್ನು ಬಿಡುವ, ಕೆರೆಯಂಗಳದಲ್ಲಿ ಗೊಬ್ಬರ ಗುಂಡಿಗಳನ್ನು ಮಾಡುವ ಹಾಗೂ ಯಾವುದೇ ಇತರೇ ಮಾಲಿನ್ಯಕಾರಕ ಚಟುವಟಿಕೆಗಳನ್ನು ನಿರ್ಬಂಧಿಸಲು ಸೂಕ್ತ ಸೂಚನೆಗಳನ್ನು ನೀಡಿ ಕಟ್ಟುನಿಟ್ಟಾಗಿ ಜಾರಿಗೊಳಿಸುವ ಕಾರಣಕರ್ತ ವ್ಯಕ್ತಿ/ಸಂಘ ಸಂಸ್ಥೆ/ಕಾರ್ಖಾನೆಗಳ ಮೇಲೆ ಕ್ರಮಜರುಗಿಸಲು ಶಿಫಾರಸ್ಸು ಮಾಡುವ ಅಧಿಕಾರ ಸಮಿತಿಗಿರುತ್ತದೆ.

iii) ಕೆರೆ ಮತ್ತು ಅದರ ಸಂಬಂಧಪಟ್ಟ ಕಾಮಗಾರಿಗಳು ಹಾಗೂ ಅದರಡಿಯಲ್ಲಿ ತೃಪ್ತಿಕರವಾಗಿ ಕಾರ್ಯನಿರ್ವಹಿಸುವ, ಉತ್ತಮ ಸ್ಥಿತಿಯಲ್ಲಿರುವ ನಾಲಾ ವ್ಯವಸ್ಥೆ ಕಾರ್ಯಾಚರಣೆ, ನಿರ್ವಹಣಾ ವೆಚ್ಚ ಇವುಗಳನ್ನು ಸ್ವಂತ ಸಂಪನ್ಮೂಲದಿಂದ ಭರಿಸಲು ಸಾಕಾಗುವಷ್ಟು ನೀರಿನ ದರಗಳನ್ನು ವಸೂಲಿ ಮಾಡುವುದು.

iv) ನೀರಿನ ತೆರಿಗೆ ಹೊರತುಪಡಿಸಿ ಕೆರೆ ಪ್ರದೇಶದಲ್ಲಿ ಹೂಳು, ಮರಳು, ಮಣ್ಣು, ಅರಣ್ಯ ಉತ್ಪನ್ನಗಳು, ಇಟ್ಟಿಗೆ ಗೂಡುಗಳನ್ನು ಮಾಡುವ ಇತ್ಯಾದಿ ಬಳಕೆದಾರರಿಗೆ ಗ್ರಾಮ ಪಂಚಾಯತಿಯು ನಿಗದಿಪಡಿಸಿದ ಶುಲ್ಕವನ್ನು ವಸೂಲಿ ಮಾಡುವ ಅಧಿಕಾರ ಸಮಿತಿಗಿರುತ್ತದೆ. ಸರ್ಕಾರದ ಆದೇಶಗಳಿಗೆ ಒಳಪಟ್ಟು ಸರ್ಕಾರ ಅನುಮತಿ ನೀಡಿದಲ್ಲಿ ಸಮಿತಿಗೆ ಆದಾಯ ಬರುವ ಮೀನುಗಾರಿಕೆ ಇತ್ಯಾದಿ ಚಟುವಟಿಕೆಗಳನ್ನು ಕೈಗೊಳ್ಳುವ ಅಧಿಕಾರವೂ ಸಮಿತಿಗಿದ್ದು, ಇವುಗಳ ನಿರ್ವಹಣೆಯ ಅಧಿಕಾರ ಸಮಿತಿಗಿರುತ್ತದೆ.

**ಜವಾಬ್ದಾರಿಗಳು:**

v) ಸಮಿತಿ ಕೆರೆ ಪ್ರದೇಶದ ಉಸ್ತುವಾರಿ ಅಭಿವೃದ್ಧಿ ಮತ್ತು ನಿರ್ವಹಣೆಗೆ ಈ ಕೆಳಕಂಡ ಕ್ರಮಗಳನ್ನು ಜಾರಿಗೊಳಿಸುವುದು.

**ಕೆರೆಗಳ ಭೌತಿಕ ನಿರ್ವಹಣೆ:**

vi) ಸಮಿತಿ ವಾರ್ಷಿಕ ದುರಸ್ಥಿ, ಉಸ್ತುವಾರಿ ಹಾಗೂ ಕಾರ್ಯಾಚರಣೆಗಳ ಕ್ರಿಯಾ ಯೋಜನೆಯನ್ನು ರೂಪಿಸುವುದು, ವಾರ್ಷಿಕ ಆದಾಯ-ವೆಚ್ಚಗಳ ಆಯವ್ಯಯ ರೂಪಿಸುವುದು ಮತ್ತು ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಜಾರಿಗೊಳಿಸತಕ್ಕದ್ದು.

vii) ಕೆರೆ ಪ್ರದೇಶದಲ್ಲಿನ ಎಲ್ಲಾ ರಚನೆಗಳನ್ನು ವಾರ್ಷಿಕವಾಗಿ ಅಥವಾ ಅಗತ್ಯ ಬಿದ್ದತಕ್ಷಣ ದುರಸ್ಥಿ ಮಾಡಿ ಉತ್ತಮ ಸ್ಥಿತಿಯಲ್ಲಿ ನಿರ್ವಹಿಸುವುದು ಸಮಿತಿಯ ಜವಾಬ್ದಾರಿಯಾಗಿರುತ್ತದೆ. ಈ ದುರಸ್ಥಿ ಕಾರ್ಯಗಳನ್ನು ಸಮಿತಿ ಸರ್ಕಾರದ ಅನುದಾನ, ಸಮಿತಿಯಿಂದ ಮೀನು ಕೃಷಿ ಸಂಪನ್ಮೂಲ ಅಥವಾ ಇತರ ಸಂಪನ್ಮೂಲಗಳಿಂದ ಹಾಗೂ ಶ್ರಮದಾನ/ವಾರದ ಕೆಲಸಗಳನ್ನು ಸಂಘಟಿಸಿ ಕೈಗೊಳ್ಳುವುದು.

viii) ತುರ್ತು ಪರಿಸ್ಥಿತಿಗಳಾದ ಪ್ರವಾಹ, ಭೂಕಂಪ ಇತ್ಯಾದಿಗಳಿಂದ ಏರಿ ಒಡೆಯುವುದು ಇತ್ಯಾದಿ ಸಂದರ್ಭಗಳಲ್ಲಿ ಸರ್ಕಾರದ ವತಿಯಿಂದ ದುರಸ್ಥಿಗಳನ್ನು ಮಾಡಲು ಸಂಬಂಧಪಟ್ಟ ಸ್ಥಳೀಯ ಅಧಿಕಾರಗಳನ್ನು ಬೇಟಿ ಮಾಡಿ ದುರಸ್ಥಿಯನ್ನು ಕೈಗೊಳ್ಳುವುದು. ಮೇಲಿನ ದುರಸ್ಥಿ ಕಾಮಗಾರಿಗಳನ್ನು ಹಣಕಾಸಿನ ಲಭ್ಯತೆಯನ್ನು ಅವಲಂಬಿಸಿ ಸರ್ಕಾರ ನಿಗದಿಪಡಿಸುವ ತಾಂತ್ರಿಕ ಗುಣಮಟ್ಟಕ್ಕನುಗುಣವಾಗಿ ಮಾಡುವುದು ಸಮಿತಿಯ ಜವಾಬ್ದಾರಿಯಾಗಿರುತ್ತದೆ. ಅದಾಗ್ಯೂ ಈ ಕೆಳಕಂಡ ವಿನ್ಯಾಸ ಬದಲಾವಣೆಗಳನ್ನು ಮಾಡುವ ಹಾಗಿಲ್ಲ.

1. ಕೆರೆಯಂಗಳವನ್ನು ಸಾಗುವಳಿ ಮಾಡಲು ಅನುಮತಿ ಕೊಡುವುದು.
2. ಕೆರೆಯ ಕೋಡಿ ಮಟ್ಟವನ್ನು ಏರಿಸುವುದು, ಇಳಿಸುವುದು ಇತ್ಯಾದಿ.
3. ಕೆರೆ ತೂಬಿನ ಮಟ್ಟವನ್ನು ಏರಿಸುವುದು, ಇಳಿಸುವುದು.
4. ಯಾವುದೇ ಮೂಲ ವಿನ್ಯಾಸಗಳನ್ನು ಬದಲಾಯಿಸುವ ಹಾಗಿಲ್ಲ.

**ix) ಕೆರೆಯ ಕಟ್ಟಡ ರಕ್ಷಣೆ ಹಾಗೂ ಒತ್ತುವರಿ ತಡೆಯುವುದು:**

ಅ) ಜಲಾನಯನ ಪ್ರದೇಶದಲ್ಲಿನ ಪೋಷಕ ಕಾಲುವೆ, ನಾಲಾ/ಹಳ್ಳಗಳ, ಖಾಸಗಿ ಹಿಡುವಳಿಗಳಲ್ಲಿನ ಕಾಲುವೆಗಳನ್ನು ವ್ಯವಸ್ಥಿತವಾಗಿ ನೋಡಿಕೊಳ್ಳುವುದು, ಅತಿಕ್ರಮಣ, ಒತ್ತುವರಿ, ಬೇರೆಡೆ ತಿರುಗಿಸುವುದು ಮತ್ತು ಅಲ್ಲಿ ನಿರ್ಮಿಸಿರುವ ಯಾವುದೇ ರಚನೆಯನ್ನು ಹಾನಿಮಾಡದಂತೆ ನೋಡಿಕೊಳ್ಳುವುದು.

ಆ) ಕೆರೆ ಅಂಗಳದ ಒತ್ತುವರಿ ತಡೆಯುವುದು, ಕೆರೆಯಂಗಳದಲ್ಲಿ ಸವಕಳಿ ಆಗುವಂತಹ ಯಾವುದೇ ಚಟುವಟಿಕೆ ನಿರ್ಬಂಧಿಸುವುದು, ಕೆರೆ ಗಡಿ ಕಲ್ಲುಗಳನ್ನು ಹಾನಿ ಮಾಡುವುದು ಅಥವಾ ಅನಧಿಕೃತವಾಗಿ ಬದಲಾಯಿಸುವುದನ್ನು ತಡೆಯುವುದು.

ಇ) ಕೆರೆಯ ತೂಬುಗಳನ್ನು ಅನಧಿಕೃತವಾಗಿ ತೆರೆಯುವುದು, ಹಾನಿ ಮಾಡುವುದು, ಕೆರೆ ಏರಿಯನ್ನು ಹಾನಿ ಮಾಡುವುದು, ಏರಿ ಮೇಲೆ ಪಶುಗಳನ್ನು ಮೇಯಿಸುವುದು, ಒತ್ತುವರಿ ಮಾಡುವುದು, ಕೆರೆಯ ಕೋಡಿಗಳನ್ನು ಹಾನಿ ಮಾಡುವುದು, ಎತ್ತರ ಕಡಿಮೆ ಮಾಡುವುದು ಇತ್ಯಾದಿಗಳನ್ನು ತಡೆಯುವುದು.

ಈ) ಅಚ್ಚುಕಟ್ಟು ಪ್ರದೇಶದಲ್ಲಿನ ರಾಜಕಾಲುವೆ, ಬಸಿಗಾಲುವೆ, ಕೋಡಿ ಕಾಲುವೆಗಳನ್ನು ಹಾನಿಮಾಡುವುದು, ಒತ್ತುವರಿ ಮಾಡುವುದು, ಅನಧಿಕೃತವಾಗಿ ತೆರೆಯುವುದು, ನೀರಿನ ಹರಿವಿಗೆ ಅಡ್ಡಿಪಡಿಸುವುದನ್ನು ತಡೆಯುವುದು, ಅವಧಿವಾರು ಸ್ವಚ್ಛಗೊಳಿಸುವುದು ಇತ್ಯಾದಿ.

**ನೀರಿನ ಸದ್ಬಳಕೆಗೆ ಕ್ರಮ:**

ಉ) ಕೆರೆಯಲ್ಲಿನ ತೂಬಿನ ಕೆಳಗುಳಿಯುವ ಸ್ಥಿರ ನೀರನ್ನು ಅನಧಿಕೃತವಾಗಿ ಪಂಪ್‌ಮಾಡುವುದು, ಸೈಪನ್ ಮಾಡುವುದು, ಕಲುಷಿತಗೊಳಿಸುವುದು ಇತ್ಯಾದಿಗಳನ್ನು ತಡೆಯುವುದು. ಕೆರೆ ಅಂಗಳದ ಮೇಲ್ಭಾಗದ ಕೃಷಿ ಜಮೀನುಗಳಿಗೆ ಪಂಪ್‌ಸೆಟ್‌ಗಳ ಮೂಲಕ ನೀರನ್ನು ಸೆಳೆದುಕೊಳ್ಳುವುದನ್ನು ತಡೆಯುವುದು.

ಊ) ನೀರು ವಿತರಣೆ ನಿಯಮಗಳ ಉಲ್ಲಂಘನೆ, ಸದರಿ ಹಂಚಿಕೆ ಷೆಡ್ಯೂಲಗಳ ಉಲ್ಲಂಘನೆ, ನೀರು ವಿತರಕರ/ ನೀರುಗಂಟಿಯ ಕಾರ್ಯಾಚರಣೆಗೆ ಅಡ್ಡಿಪಡಿಸುವುದು, ಸಮಿತಿ ನಿಗಧಿಪಡಿಸುವ ಬೆಳೆ ಯೋಜನೆಗಳನ್ನು ಉಲ್ಲಂಘಿಸುವುದರ ವಿರುದ್ಧ ಕ್ರಮ ಜರುಗಿಸುವುದು.

ಋ) ವಾರ್ಷಿಕ ಬೆಳೆ ಯೋಜನೆಯನ್ನು ರೂಪಿಸುವುದು, ಬೆಳೆ ಪದ್ಧತಿಗಳನ್ನು ಉತ್ತಮಪಡಿಸುವುದು, ನೀರಾವರಿ ಪದ್ಧತಿಗಳನ್ನು ಉತ್ತಮಪಡಿಸುವುದು, ನೀರು ವಿತರಣೆ ಸಮರ್ಪಕವಾಗಿ ನಿರ್ವಹಿಸುವುದು.

ನೀರಿನ ಸಂಯುಕ್ತ ಬಳಕೆಯನ್ನು ಜಾರಿಗೆ ತರುವುದು ಇತ್ಯಾದಿ ಕ್ರಮಗಳಿಂದ ಭೂಮಿ ಮತ್ತು ನೀರಿನ ಮೂಲಗಳನ್ನು ಉತ್ತಮವಾಗಿ ಎಲ್ಲಾ ಕ್ರಮಗಳನ್ನು ಸಮಿತಿ ಕೈಗೊಳ್ಳುವುದು.

ಎ) ಅಚ್ಚುಕಟ್ಟು ಪ್ರದೇಶದಲ್ಲಿರುವ ಸಾಮೂಹಿಕ ಬಾವಿಗಳಲ್ಲಿನ ನೀರಿನ ಬಳಕೆ, ಬಗ್ಗೆ ನಿಗಾವಹಿಸುವುದು ಇತ್ಯಾದಿ.

**ಪರಿಸರ ನಿರ್ವಹಣೆ:**

ಏ) ಜಲಾನಯನ ಪ್ರದೇಶದ ಸಾಮೂಹಿಕ ಹಾಗೂ ಖಾಸಗಿ ಹಿಡುವಳಿಗಳಲ್ಲಿ ಮಣ್ಣು ಸವಕಳಿ ತಡೆಯಲು ಕ್ರಮಗಳು.

ಐ) ಜಲಾನಯನ ಹಾಗೂ ಕೆರೆ ಪ್ರದೇಶದಲ್ಲಿನ ತೋಪುಗಳ ಹುಲ್ಲುಗಾವಲು, ಮರಗಿಡಗಳನ್ನು ನಿರ್ವಹಣೆ ಮಾಡುವುದು, ಅತಿಕ್ರಮಣ ತಡೆಯುವುದು ಇತ್ಯಾದಿ.

**ಸರ್ಕಾರದ ನಿಯಮಗಳ ಪಾಲನೆ:**

ಒ) ಕೆರೆಯಲ್ಲಿನ ಮೀನುಗಾರಿಕೆ, ಮರಳು, ಹೂಳು, ಇತ್ಯಾದಿಗಳ ಬಳಕೆಗೆ ಸರ್ಕಾರದ ನಿಯಮಗಳನ್ನು ಪಾಲಿಸುವುದು ಹಾಗೂ ಜಾರಿಗೊಳಿಸುವುದು.

ಓ) ಅಚ್ಚುಕಟ್ಟು ಪ್ರದೇಶದ ನೀರಿನ ತೆರಿಗೆಗಳ ಹೆಚ್ಚುವರಿ ಪರಿಷ್ಕರಣೆ, ಪಾವತಿ ಅವಧಿ ಷೆಡ್ಯೂಲಗಳನ್ನು ತಯಾರಿಸುವುದು.

**ಹಣಕಾಸು ನಿರ್ವಹಣೆ:**

x. ಸಮಿತಿಯು ಮುಂದಿನ ವರ್ಷಕ್ಕೆ ಆಯವ್ಯಯವನ್ನು ಸಿದ್ಧಪಡಿಸಿ ಸಮಿತಿ ಸಭೆಗೆ ಮಂಡಿಸಿ ಮಾರ್ಚ್ ಅಂತ್ಯದೊಳಗೆ ಒಪ್ಪಿಗೆ ಪಡೆಯತಕ್ಕದ್ದು.

xi. ಸಮಿತಿಯು ಕಾನೂನು ರೀತ್ಯಾ ಮಾಡಬೇಕಿರುವ ವಾರ್ಷಿಕ ಲೆಕ್ಕ ಪರಿಶೋಧನೆ, ವಾರ್ಷಿಕ ವರದಿಗಳನ್ನು ನಿಗದಿತ ಅವಧಿಯೊಳಗೆ ಗ್ರಾಮ ಪಂಚಾಯತಿಗೆ ಸಲ್ಲಿಸುವುದು.

xii. ಸಮಿತಿ ತನ್ನ ಲೆಕ್ಕ ಪತ್ರಗಳನ್ನು ದಾಖಲೆಗಳನ್ನು ತನ್ನ ಕಛೇರಿಯಲ್ಲಿ ಕಟ್ಟುನಿಟ್ಟಾಗಿ ನಿರ್ವಹಿಸುವುದು. ಸಮಿತಿಯ ಲೆಕ್ಕ ವ್ಯವಹಾರಗಳನ್ನು ಪಾರದರ್ಶಕವಾಗಿ ನಡೆಸಿ ತ್ರೈಮಾಸಿಕವಾಗಿ ಸಾರ್ವಜನಿಕ ಸ್ಥಳದಲ್ಲಿ, ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ಪ್ರಚಾರ ಪಡಿಸುವುದು.

xiii. ಸಮಿತಿಯ ಹಣಕಾಸು ವ್ಯವಹಾರಗಳಲ್ಲಿ ಯಾವುದೇ ರೀತಿಯ ದುರುಪಯೋಗವಾದಲ್ಲಿ ಹಣದುರುಪಯೋಗ, ನಷ್ಟ ಮತ್ತು ತನಿಖೆಗೆ ಸಂಬಂಧಿಸಿದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 111 ರಡಿಯ ನಿರೂಪಣೆಯಂತೆ ಕ್ರಮವಹಿಸುವುದು.

<u>ನಿಯಮಾವಳಿಗಳಿಗೆ ತಿದ್ದುಪಡಿ:</u>

xiv. ಸಮಿತಿಯ ಮೂಲ ಉದ್ದೇಶಗಳಿಗೆ ವ್ಯತಿರಿಕ್ತವಾಗಿ ಸಮಿತಿಯ ಉಪವಿಧಿಗಳಲ್ಲಿ ಯಾವುದೇ ತಿದ್ದುಪಡಿಗಳನ್ನು ಮಾಡುವ ಹಾಗಿಲ್ಲ. ಆದರೆ ತನ್ನ ಉಪವಿಧಿಗಳ ಪರಿಮಿತಿಯಲ್ಲಿ ನಿಯಮಗಳನ್ನು, ನೀತಿ ನಿಬಂಧನೆಗಳನ್ನು ರೂಪಿಸಿ ಅಳವಡಿಸಿಕೊಳ್ಳುವ ಅಧಿಕಾರ ಸಮಿತಿಗಿರುತ್ತದೆ. ಕಾಲಕಾಲಕ್ಕೆ ಅಗತ್ಯ ಬೀಳುವ ತಿದ್ದುಪಡಿಗಳನ್ನು ಮಾಡುವುದು, ಹೊಸ ನಿಯಮಾವಳಿಗಳನ್ನು ರೂಪಿಸುವುದು ಇತ್ಯಾದಿಗಳನ್ನು ಗ್ರಾಮ ಪಂಚಾಯತಿಯಿಂದ ಅನುಮೋದನೆ ಪಡೆದು ಮಾಡತಕ್ಕದ್ದು. ಆದರೆ ಆ ರೀತಿಯ ನೀತಿ ನಿಯಮಾವಳಿಗಳು ಕರ್ನಾಟಕ ನೀರಾವರಿ ಅಧಿನಿಯಮ 1965 ಮತ್ತು ಕರ್ನಾಟಕ ನೀರಾವರಿ ನಿಯಮಾವಳಿಗಳು 1965, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993, ಭಾರತೀಯದಂಡ ಸಂಹಿತೆಯ ಅಥವಾ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಆದೇಶಗಳ ಚೌಕಟ್ಟಿನಲ್ಲಿರಬೇಕು.

<u>ವ್ಯಾಜ್ಯಗಳ ನಿರ್ವಹಣೆ:</u>

xv. ಸಮಿತಿಯ ಕಾರ್ಯನಿರ್ವಹಣೆಯಲ್ಲಿ ಉದ್ಭವಿಸುವ ಎಲ್ಲಾ ವ್ಯಾಜ್ಯಗಳನ್ನು ಪರಿಹರಿಸುವ ಜವಾಬ್ದಾರಿ ಸಮಿತಿಯದ್ದಾಗಿರುತ್ತದೆ. ಯಾವುದೇ ಸದಸ್ಯ ಸಮಿತಿಯ ನಿರ್ಣಯದಿಂದ ಬಾಧಿತನಾದಲ್ಲಿ ಗ್ರಾಮ ಪಂಚಾಯತಿ ಮೂಲಕ ಪರಿಹಾರ ಪಡೆಯಲು ಮೇಲ್ಮನವಿ ಸಲ್ಲಿಸುವ ಅಧಿಕಾರ ಹೊಂದಿರುತ್ತಾನೆ ಅಥವಾ ಸಮಿತಿಯೇ ಅಗತ್ಯಬಿದ್ದಲ್ಲಿ ಮೇಲ್ಮನವಿ ಸಲ್ಲಿಸಬಹುದು.

**9. ಗ್ರಾಮ ಪಂಚಾಯತಿ ಹಾಗೂ ಸಣ್ಣ ನೀರಾವರಿ ಇಲಾಖೆಯ ಜವಾಬ್ದಾರಿಗಳು:**

i) ಸಮಿತಿಯ ಕಾರ್ಯಚಟುವಟಿಕೆಗಳು ಸಮಿತಿಯ ನಿಯಮಾವಳಿಯ ಪ್ರಕಾರ ನಡೆಯಲು ಮಾರ್ಗದರ್ಶನ ಮತ್ತು ಸಹಕಾರ ನೀಡುವುದು.

ii) ಸಮಿತಿಯಲ್ಲಿ ಪರಿಹಾರವಾಗದ ಯಾವುದೇ ಕುಂದುಕೊರತೆಗಳನ್ನು ಬಗೆಹರಿಸುವುದು.

iii) ಸಮಿತಿಯ ಕಾರ್ಯಕ್ರಮಗಳಿಗೆ ಸರ್ಕಾರದ ಇತರೆ ಇಲಾಖೆಗಳ, ಅಭಿವೃದ್ಧಿ ಯೋಜನೆಯಡಿ ಬೆಂಬಲ ಬೇಕಾದಲ್ಲಿ ಒದಗಿಸುವುದು, ತಾಂತ್ರಿಕ ಸಲಹೆ, ಮಾರ್ಗದರ್ಶನ, ತರಬೇತಿಗಳು ಇತ್ಯಾದಿ ಪೂರಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

iv) ಸಮಿತಿ ಯಾವುದೇ ನಿಯಮಗಳನ್ನು ಉಲ್ಲಂಘಿಸಿ, ಉದ್ದೇಶಗಳಿಗೆ, ಬೈಲಾಗಳಲ್ಲಿನ ನಿಯಮಗಳಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸಿದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವುದು.

v) ನಿಯಮಿತ ಕಾಲಿಕವಾಗಿ ಸಮಿತಿಯ ಕಾರ್ಯಪ್ರಗತಿಯನ್ನು ಮೌಲ್ಯಮಾಪನ ಮಾಡುವುದು ಅಗತ್ಯವಾಗುವ ಎಲ್ಲಾ ತಾಂತ್ರಿಕ ಹಾಗೂ ಆಡಳಿತಾತ್ಮಕ ಸಹಕಾರ ನೀಡುವುದು.

vi) ಹಂಗಾಮುವಾರು ಬೆಳೆಯ ಯೋಜನೆಯನ್ನು ಸಿದ್ಧಪಡಿಸಿ ಸಮುಚಿತ ಪ್ರಾಧಿಕಾರಕ್ಕೆ ಪ್ರತಿಯೊಂದು ಬೆಳೆಯಡಿಯಲ್ಲಿ ಬರುವ ಪ್ರದೇಶವನ್ನು ತಿಳಿಸಬೇಕು ಮತ್ತು ನೀರಾವರಿ ನೀರನ್ನು ಬಳಸಿಕೊಂಡು ಸಾಗುವಳಿ ಮಾಡಲಾದ ಪ್ರದೇಶದ ಮತ್ತು ಬೆಳೆಗಳ ವಿವರವನ್ನು ಸಂಗ್ರಹಿಸಿ, ಸಂಕಲಿಸಿ ಸಮುಚಿತ ಪ್ರಾಧಿಕಾರಕ್ಕೆ ತಿಳಿಸಬೇಕು.

vii) ಸಮಿತಿಯಿಂದ ಯಾವುದೇ ರೀತಿಯಲ್ಲಿ ಹಣದ ದುರ್ಬಳಕೆಯಾದಂತಹ ಸಂದರ್ಭಗಳಲ್ಲಿ ಅಧ್ಯಾಯ 5ರ ಖಂಡ 17ರ ಉಪವಿಧಿಗಳಂತೆ ಅದರ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸುವ ಅಥವಾ ತನಿಖೆ ನಡೆಸಿ ಸಂಬಂಧಿತ ಕಾನೂನು ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಗ್ರಾಮ ಪಂಚಾಯತಿಗೆ ಹಾಗೂ ಸಣ್ಣ ನೀರಾವರಿ ಇಲಾಖೆಗೆ ಇರುತ್ತದೆ.

viii) ಕೆರೆ ಮತ್ತು ತತ್ಸಂಬಂಧಿ ಚಟುವಟಿಕೆಗಳು ಇಲಾಖೆಯ ಪರಿವೀಕ್ಷಣೆಗೆ ಮುಕ್ತವಾಗಿರತಕ್ಕದ್ದು ಹಾಗೂ ಕಾಲಕಾಲಕ್ಕೆ ಸರ್ಕಾರ ನಿಗದಿಪಡಿಸಿರುವ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸುವುದು.

## ಅಧ್ಯಾಯ-4

### ಸಮಿತಿಯ ಸಭೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು

**10. ಸಮಿತಿಯ ಸಭೆಗಳನ್ನು ಕರೆಯುವುದು:**

ಅ) ಸಮಿತಿಯು, ಆಯಾ ಗ್ರಾಮ ಪಂಚಾಯತಿ ಕಛೇರಿ ಆವರಣದೊಳಗೆ ಅಥವಾ ಅನುಕೂಲಕರವಾಗಬಹುದಾದಂತಹ ಇತರ ಸ್ಥಳದಲ್ಲಿನ ಕನಿಷ್ಠಪಕ್ಷ ಎರಡು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(ಆ) ಸಮಿತಿಯ ಸಭೆಯನ್ನು, ಅದರ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ಕಾರ್ಯದರ್ಶಿಯು ನಿಗದಿಪಡಿಸಬಹುದಾದಂತಹ ದಿನಗಳಂದು ಮತ್ತು ಸಮಯದಲ್ಲಿ ನಡೆಸತಕ್ಕದ್ದು.

(ಇ) ಕಾರ್ಯದರ್ಶಿಯು, ಸಮಿತಿಯ ಪ್ರತಿಯೊಂದು ಸಭೆಯ ಬಗ್ಗೆ ಸದಸ್ಯರಿಗೆ ಕನಿಷ್ಠಪಕ್ಷ ಒಂದು ವಾರದ ಮೊದಲು ನೋಟೀಸನ್ನು ನೀಡತಕ್ಕದ್ದು ಮತ್ತು ಉದ್ದೇಶಿತ ಕಾರ್ಯಸೂಚಿಯ ಒಂದು ಪ್ರತಿಯನ್ನು ನೋಟೀಸಿನೊಂದಿಗೆ ತಲುಪುವಂತೆ ವ್ಯವಸ್ಥೆ ಕೈಗೊಳ್ಳುವುದು.

ಆದರೆ, ಸಭಾಧ್ಯಕ್ಷರು, ಕಾರ್ಯಸೂಚಿಯಲ್ಲಿ ಸೇರಿಸಿರದ ಯಾವುದೇ ತುರ್ತು ವ್ಯವಹಾರದ ವಿಷಯವನ್ನು ಸಭೆಯ ಮುಂದೆ ಮಂಡಿಸಬಹುದು.

ಅಲ್ಲದೇ, ಕಾರ್ಯದರ್ಶಿಯು ಕನಿಷ್ಠ ಪಕ್ಷ ಒಂದು ದಿನ ಮೊದಲು ನೋಟೀಸನ್ನು ನೀಡುವ ಮೂಲಕ ತುರ್ತು ಸಭೆಯನ್ನು ಕರೆಯಬಹುದು.

(ಈ) ಸಮಿತಿಯ ಸದಸ್ಯರು ಯಾವುದೇ ವಿಷಯಗಳನ್ನು ಸಭೆಯ ಮುಂದೆ ಮಂಡಿಸಲು ಇಚ್ಛಿಸಿದಲ್ಲಿ ವಿಷಯವನ್ನು ಸಮಿತಿಗೆ ಲಿಖಿತ ಮೂಲಕ ಸಭೆಯ ದಿನಾಂಕದಿಂದ ಮೂರು ದಿನಗಳ ಮುಂಚೆ ಒಪ್ಪಿಸುವುದು.

**11. ಕೋರಂ:**

ಸಮಿತಿಯ ಸಭೆಯನ್ನು ನಡೆಸುವುದಕ್ಕೆ ಅಗತ್ಯವಾದ ಕೋರಂ ಈ ಮುಂದಿನಂತಿರತಕ್ಕದ್ದು:

ಅ) ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿ ಸೇರಿದಂತೆ ಸಮಿತಿಯ ಕನಿಷ್ಠ 1/3 ಭಾಗದಷ್ಟು ಸದಸ್ಯರು ಸಭೆಗೆ ಹಾಜರಿರತಕ್ಕದ್ದು.

ಆ) ಕೋರಂ ಕೊರತೆಯಿಂದಾಗಿ ಸಮಿತಿಯ ಸಭೆಯನ್ನು ನಡೆಸಲಾಗದಿದ್ದರೆ, ಸದಸ್ಯ ಕಾರ್ಯದರ್ಶಿಯ ಅಧಿಸೂಚಿಸುವ ಮತ್ತೊಂದು ದಿನಕ್ಕೆ ಸಭೆಯನ್ನು ಮುಂದೂಡಬಹುದು.

ಇ) ಮುಂದೂಡಲ್ಪಟ್ಟ ಸಭೆಯೂ ಸಹ ಅಗತ್ಯ ಕೋರಂನ್ನು ಹೊಂದಿರದಿದ್ದಲ್ಲಿ, ಆಗ ವಾಸ್ತವವಾಗಿ ಹಾಜರಿರುವ ಸದಸ್ಯರನ್ನೇ ಕೋರಂ ಎಂದು ಪರಿಗಣಿಸಿ ಸಭೆ ನಡೆಸಬಹುದು.

**12. ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಗೈರು ಹಾಜರಿಯಲ್ಲಿ ಅನುಸರಿಸಬೇಕಾದ ಪದ್ಧತಿ:**

ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಗೈರು ಹಾಜರಾಗಿದ್ದಲ್ಲಿ, ಸಭೆಯಲ್ಲಿ ಹಾಜರಿರುವ ಸದಸ್ಯರಲ್ಲಿ ಒಬ್ಬ ಸದಸ್ಯನನ್ನು ಸಭಾಧ್ಯಕ್ಷನಾಗಿ ಚುನಾಯಿಸತಕ್ಕದ್ದು ಹಾಗೂ ಸದರಿ ಸದಸ್ಯ ಆ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

ವಿವರಣೆ: ಈ ಉಪಬಂಧದ ಉದ್ದೇಶಕ್ಕಾಗಿ "ಗೈರು ಹಾಜರಿ" ಎಂದರೆ ಕೇವಲ ತಾತ್ಕಾಲಿಕ ಸ್ವರೂಪದ್ದಾಗಿರುತ್ತದೆಯೇ ಹೊರತು ಆಕಸ್ಮಿಕ ಖಾಲಿ ಹುದ್ದೆಗೆ ಉಲ್ಲೇಖಿತವಾಗುವುದಿಲ್ಲ.

**13. ಪ್ರಶ್ನೆಗಳನ್ನು ನಿರ್ಣಯಿಸುವ ವಿಧಾನ:**

ಅ) ಸಮಿತಿಯ ಮುಂದೆ ಇರುವ ಎಲ್ಲ ವಿಷಯಗಳನ್ನು ಸಾಮಾನ್ಯವಾಗಿ ಹಾಜರಿರುವ ಸದಸ್ಯರೆಲ್ಲರೂ ಒಮ್ಮತಾಭಿಪ್ರಾಯದಿಂದ ನಿರ್ಧರಿಸತಕ್ಕದ್ದು.

ಆ) ಒಮ್ಮತಾಭಿಪ್ರಾಯ ಮೂಡದಿದ್ದಲ್ಲಿ, ಈ ಉಪವಿಧಿಯ ಖಂಡ 14 ರಡಿಯಲ್ಲಿ ಗೊತ್ತುಪಡಿಸಲಾದ ಮಾದರಿಯಲ್ಲಿ ಮತ ಹಾಕುವ ಮೂಲಕ ನಿರ್ಧರಿಸತಕ್ಕದ್ದು.

**14. ಮತ ಹಾಕುವ ವಿಧಾನ:**

ಅ) ಎಲ್ಲ ಸದಸ್ಯರು ಮತ ಹಾಕುವುದಕ್ಕೆ ಸಮಾನ ಹಕ್ಕನ್ನು ಹೊಂದಿರತಕ್ಕದ್ದು.

ಆ) ಕೈಗಳನ್ನು ಎತ್ತುವ ಮೂಲಕ ಮತ ಹಾಕಬಹುದು, ಆದರೆ ಸಮಿತಿಯು, ಯಾವುದೇ ವಿಷಯ ಅಥವಾ ವಿಷಯಗಳನ್ನು ಮತಪತ್ರದ ಮೂಲಕ ನಿರ್ಧರಿಸತಕ್ಕದೆಂದು ನಿರ್ಣಯಿಸಬಹುದು.

ಇ) ವಿಷಯವನ್ನು ಮತಕ್ಕೆ ಹಾಕಿದಲ್ಲಿ, ಸಮಿತಿಯ ಹಾಜರಿರುವ ಸದಸ್ಯರು ಸಾಧಾರಣ ಬಹುಮತದಿಂದ ಅದನ್ನು ಬೆಂಬಲಿಸಿದ ಹೊರತು, ಅದನ್ನು ಅಂಗೀಕರಿಸತಕ್ಕದ್ದಲ್ಲ.

ಈ) ಸಮಾನ ಸಂಖ್ಯೆಯ ಮತಗಳು ಬಿದ್ದ ಸಂದರ್ಭದಲ್ಲಿ, ಸಭಾಧ್ಯಕ್ಷರು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

**15. ನಿರ್ಣಯಗಳನ್ನು ದಾಖಲಿಸುವುದು.**

ಅ) ಕಾರ್ಯದರ್ಶಿಯು, ಸಮಿತಿಯ ನಿರ್ಣಯಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ನಿರ್ಣಯಗಳ ಪ್ರತಿಗಳನ್ನು ಸದಸ್ಯರಿಗೆ ಪರಿಚಲನೆ ಮಾಡತಕ್ಕದ್ದು.

ಆ) ಮೇಲೆ ನಮೂದಿಸಿದ ದಾಖಲೆಗಳನ್ನು ಸದಸ್ಯರ ಅವಗಾಹನೆಗಾಗಿ ಸಮಿತಿಯ ಕಾರ್ಯದರ್ಶಿಯ ಸುಬರ್ದಿನಲ್ಲಿ ಇಡತಕ್ಕದ್ದು.

## ಅಧ್ಯಾಯ – 5
## ಶಿಸ್ತು ಕ್ರಮ

**16. ದೂರುಗಳ ಪರಿಹಾರ ಕಾರ್ಯತಂತ್ರ:**

ಅ) ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ಸಮಗ್ರ ಕಾರ್ಯ ನಿರ್ವಹಣೆಗೆ ಸಂಬಂಧಪಟ್ಟಂತೆ ಯಾವುದೇ ದೂರು, ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಯಾವೊಬ್ಬ ಸದಸ್ಯನ ವಿರುದ್ಧವಾಗಿರುವ ಸಂದರ್ಭದಲ್ಲಿ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯು ಈ ಮುಂದಿನ ಕಾರ್ಯವಿಧಾನವನ್ನು ಅನುಸರಿಸಬೇಕು.

i. ದೂರು ಸ್ವೀಕರಿಸಿದ 10 ದಿನಗಳೊಳಗಾಗಿ ಇಬ್ಬರು ಸದಸ್ಯರಿರುವ ತನಿಖಾ ತಂಡವನ್ನು ರಚಿಸಬೇಕು.

ii. ಸದರಿ ತಂಡವು ದೂರನ್ನು ಪರಿಶೀಲಿಸಿ ಅವ್ಯವಹಾರಗಳನ್ನು ಸರಿಪಡಿಸುವ ವಿಧಾನಗಳನ್ನು ಸೂಚಿಸಿ, ತಂಡ ರಚನೆಯಾದ ಹತ್ತು ದಿನಗಳೊಳಗಾಗಿ ಸ್ಥಾಯಿ ಸಮಿತಿಗೆ ವರದಿ ನೀಡಬೇಕು.

iii. ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಗೆ ದೂರು ಪ್ರತಿಗಳ (ಫಿರ್ಯಾದುದಾರನ ಹೆಸರು ತಿಳಿಸಿರದಿದ್ದಲ್ಲಿ) ಮತ್ತು ತನಿಖಾ ತಂಡದ ವರದಿಯೊಂದಿಗೆ ಕಾರಣ ಕೇಳುವ ನೋಟೀಸನ್ನು ಕಳುಹಿಸಿ ಅವ್ಯವಹಾರಗಳನ್ನು ಸರಿಪಡಿಸಲು 10 ದಿನಗಳ ಕಾಲಾವಕಾಶ (ನೋಟೀಸು ಜಾರಿಗೊಳಿಸಿದ ದಿನಾಂಕದಿಂದ) ನೀಡಬೇಕು.

iv. ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯು 15 ದಿನಗಳೊಳಗಾಗಿ (ಕಾರಣ ಕೇಳುವ ನೋಟೀಸು ಜಾರಿಗೊಳಿಸಿದ ದಿನಾಂಕದಿಂದ) ಸ್ಥಾಯಿ ಸಮಿತಿಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕು.

v. ಅನುಪಾಲನಾ ವರದಿಯನ್ನು ಸ್ವೀಕರಿಸಿದ ತರುವಾಯ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿಯು ಅವ್ಯವಹಾರಗಳನ್ನು ಸರಿಪಡಿಸಿದ ಬಗ್ಗೆ ಸ್ಥಾಯಿ ಸಮಿತಿಯು ಖುದ್ದಾರಿ ಪರಿಶೀಲಿಸಲು.

vi. ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ಅನುಪಾಲನಾ ವರದಿಯನ್ನು ಸಲ್ಲಿಸಿದ್ದರೂ ಅವ್ಯವಹಾರಗಳನ್ನು ಸರಿಪಡಿಸಿ ಅಥವಾ ಕಾರಣ ಕೇಳುವ ನೋಟೀಸಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲು ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯು ನಿರಾಕರಿಸಿದೆ ಎಂದು ಸ್ಥಾಯಿ ಸಮಿತಿ ಅಭಿಪ್ರಾಯಪಟ್ಟರೆ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯನ್ನು 15 ದಿನಗಳ ಅವಧಿಯೊಳಗಾಗಿ ರದ್ದು ಮಾಡಬಾರದೇಕೆ ಎಂಬ ಬಗ್ಗೆ ಕಾರಣ ಕೇಳುವ ಎರಡನೇ ನೋಟೀಸನ್ನು ಸ್ಥಾಯಿ ಸಮಿತಿಯು ಜಾರಿ ಮಾಡಬೇಕು.

vii. ಅವ್ಯವಹಾರಗಳನ್ನು ಸರಿಪಡಿಸಲು ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯು ಎರಡನೇ 15 ದಿನಗಳ ಅವಧಿಯಲ್ಲಿ ತೆಗೆದುಕೊಂಡ ಕ್ರಮಗಳು ತೃಪ್ತಿಕರವಾಗಿಲ್ಲದಿದ್ದಲ್ಲಿ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯು "ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯನ್ನು" ರದ್ದುಪಡಿಸುವ ಪ್ರಸ್ತಾವನೆಯನ್ನು ಗ್ರಾಮ ಪಂಚಾಯತಿಯ ಸಾಮಾನ್ಯ ಅಥವಾ ವಿಶೇಷ ಸಭೆಗೆ ಸಲ್ಲಿಸಬೇಕು. ಈ

ಪ್ರಸ್ತಾವನೆಯ ಬಗ್ಗೆ ಗ್ರಾಮ ಪಂಚಾಯತಿಯ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು.

viii. ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯನ್ನು ರದ್ದುಪಡಿಸಿದ ಸಂದರ್ಭದಲ್ಲಿ ಅದು ಹಾಗೆ ರದ್ದುಗೊಂಡ 1 ತಿಂಗಳೊಳಗಾಗಿ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ಮರು ರಚನೆ ಮಾಡಿದ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

ix. ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ರಚನೆಯಾಗುವವರೆಗೆ ಅದರ ಪ್ರಕಾರ್ಯಗಳನ್ನು ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯು ನಿರ್ವಹಿಸಬೇಕು.

x. ಮೇಲಿನ ವಿಧಾನವನ್ನು ಉಪಖಂಡಿಕೆ (i) ರಿಂದ (vii) ನ್ನು ಅನುಸರಿಸಿ ಶಿಸ್ತು ಕ್ರಮ ಜರುಗಿಸುವ ಅಧಿಕಾರ ಸಣ್ಣ ನೀರಾವರಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗೆ ಇರುತ್ತದೆ. ಪರಂತು ಉಪಖಂಡಿಕೆ (viii) ಹಾಗೂ (ix) ರಂತೆ ಗ್ರಾಮ ಪಂಚಾಯಿತಿಗೆ ಮಾತ್ರ ಕ್ರಮ ಜರುಗಿಸುವ ಅಧಿಕಾರವಿರುತ್ತದೆ.

**17. ಖಾತೆಯ ನಿರ್ವಹಣೆಯ ಅಮಾನತ್ತುಗೊಳಿಸುವುದು**

ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ಖಾತೆಯ ವ್ಯವಹಾರಗಳು ನಿಯಮಗಳಿಗನುಸಾರ ನಿರ್ವಹಿಸದಿದ್ದರೆ ಅಥವಾ ಅವ್ಯವಹಾರಗಳು ಮೇಲ್ನೋಟಕ್ಕೆ ಕಂಡುಬಂದರೆ ಅಧ್ಯಕ್ಷ ಹಾಗೂ ಸದಸ್ಯ ಕಾರ್ಯದರ್ಶಿ ಆ ಖಾತೆಯನ್ನು ನಿರ್ವಹಿಸುವುದನ್ನು ನಿಲ್ಲಿಸುವಂತೆ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯು ನಿರ್ದೇಶನ ನೀಡಬೇಕು ಹಾಗೂ ಸಂಬಂಧಪಟ್ಟ ಬ್ಯಾಂಕ್ ವ್ಯವಸ್ಥಾಪಕರಿಗೆ ಪತ್ರ ಮುಖೇನ ತಿಳಿಸಬೇಕು.

## ಅಧ್ಯಾಯ-6

**18. ಹಣಕಾಸು**

ಅ) ರಿಸರ್ವ್ ಬ್ಯಾಂಕ್‌ನಿಂದ ಮನ್ನಣೆ ಪಡೆದ ರಾಷ್ಟ್ರೀಕೃತ ಬ್ಯಾಂಕ್ ಅಥವಾ ಅನುಸೂಚಿತ ಬ್ಯಾಂಕ್ ಅಥವಾ ಸಹಕಾರಿ ಬ್ಯಾಂಕ್‌ನ ಖಾತೆಯಲ್ಲಿ ಅಥವಾ ಅಂಚೆ ಕಚೇರಿಯಲ್ಲಿ ಸಮಿತಿಯ ವಿವಿಧ ನಿಧಿಗಳನ್ನು ಠೇವಣಿ ಇಡತಕ್ಕದ್ದು, ಅಂಥ ಖಾತೆಯನ್ನು ಸಮಿತಿಯ ಹೆಸರಿನಲ್ಲಿ ತೆರೆಯತಕ್ಕದ್ದು.

ಆ) ಮೇಲೆ ತಿಳಿಸಿರುವ ಖಾತೆಗಳನ್ನು ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಯವರು ಜಂಟಿಯಾಗಿ ನಿರ್ವಹಿಸತಕ್ಕದ್ದು.

ಇ) ಸಮಿತಿಯ ಎಲ್ಲಾ ಆದಾಯ ಮತ್ತು ವೆಚ್ಚಗಳನ್ನು ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ಪ್ರತಿ ಸಭೆಯಲ್ಲೂ ಚರ್ಚಿಸತಕ್ಕದ್ದು.

ಈ) ಒಂದು ಸಾವಿರ ರೂ.ಗಳನ್ನು ಮೀರಿದ ಯಾವುದೇ ಹಣ ಹಿಂತೆಗೆಯುವಿಕೆಗೆ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಪೂರ್ವಾನುಮತಿ ಪಡೆಯತಕ್ಕದ್ದು.

ಪರಂತು, ತುರ್ತು ವೆಚ್ಚಗಳನ್ನು ಭರಿಸಲು ಯಾವುದೇ ಹಣವನ್ನು ಹಿಂತೆಗೆದುಕೊಳ್ಳಬಹುದು. ಅದನ್ನು ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚಿಸತಕ್ಕದ್ದು ಮತ್ತು ಘಟನೋತ್ತರ ಅನುಮೋದನೆ ಪಡೆಯತಕ್ಕದ್ದು.

**19. ಲಾಭದ ಮೇಲೆ ನಿಷೇದ:**

ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಲಾಭ ಮತ್ತು ಆಸ್ತಿಯ ಯಾವುದೇ ಭಾಗವನ್ನು ವೃತ್ತಿ ವೇತನದ ರೂಪದಲ್ಲಾಗಲೀ ಅಥವಾ ಆತನ ಲಾಭದ ರೂಪದಲ್ಲಾಗಲೀ ಯವುದೇ ಸದಸ್ಯನಿಗೆ ಅಥವಾ ಯಾವುದೇ ಸದಸ್ಯರ ಮೂಲಕ ಪಡೆಯ ಬಯಸಿದ್ದಲಿ ಯಾವುದೇ ವ್ಯಕ್ತಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿನಿಯೋಗಿಸತಕ್ಕದ್ದಲ್ಲ ಅಥವಾ ವರ್ಗಾಯಿಸತಕ್ಕದ್ದಲ್ಲ.

ಪರಂತು, ಈ ಖಂಡದಲ್ಲಿರುವ ಯಾವುದೂ, ಕೆರೆ ಅಭಿವೃದ್ಧಿ ಪರವಾಗಿ ಸದ್ಭಾವನೆಯಿಂದ ಖರ್ಚು ಮಾಡಿದ್ದಲ್ಲಿ ಯಾವುದೇ ಸದಸ್ಯನಿಗೆ ಮರುಪಾವತಿಯ ಸಂದಾಯ ಮಾಡುವುದಕ್ಕೆ ಅಡ್ಡಿಪಡಿಸತಕ್ಕದ್ದಲ್ಲ.

ಮತ್ತು ಪರಂತು, ಸದಸ್ಯರಿಗೆ ತರಬೇತಿಗಾಗಿ ಹಂಚಿಕೆಯಾದ ಯಾವುದೇ ಮೊತ್ತವನ್ನು ಸದ್ಭಾವನೆಯಿಂದ ಅಂತಹ ಸದಸ್ಯರಿಗೆ ಸಂದಾಯ ಮಾಡುವುದಕ್ಕೆ ಈ ಖಂಡದಲ್ಲಿರುವ ಯಾವುದೂ ಅಡ್ಡಪಡಿಸತಕ್ಕದ್ದಲ್ಲ.

## ಅಧ್ಯಾಯ–7
## ಇತರ ವಿವರಗಳು

## 20. ಸದಸ್ಯತ್ವವನ್ನು ಕೊನೆಗೊಳಿಸುವುದು:

ಈ ಕೆಳಕಂಡ ಯಾವುದೇ ಘಟನೆಗಳು ಸಂಭವಿಸಿದಲ್ಲಿ ಸದಸ್ಯತ್ವವು ರದ್ದಾಗತಕ್ಕದ್ದು.

i. ಸದಸ್ಯರು ಸಮಿತಿಯ ನಿರಂತರ ಮೂರು ಸಭೆಗಳಿಗೆ ಗೈರು ಹಾಜರಾದಲ್ಲಿ;
ii. ಸಮಿತಿಯ ವ್ಯಾಪ್ತಿಯಲ್ಲಿ ಬರುವ ಯಾವುದೇ ವ್ಯವಹಾರದ ನಿರ್ವಹಣೆಯಲ್ಲಿ ಆತ/ಆಕೆಯು ಭ್ರಷ್ಟಚಾರದಲ್ಲಿ ತೊಡಗಿದ್ದಲ್ಲಿ;
iii. ಯಾವುದೇ ಕಾರಣದ ನಿಮಿತ್ತ ಸದಸ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿ ತೊರೆದಲ್ಲಿ;
iv. ಯಾವುದೇ ನ್ಯಾಯಾಲಯದಿಂದ ಆತ/ಆಕೆಯು ಆಪಾದಿತನೆಂದು ತೀರ್ಮಾನವಾಗಿದ್ದಲ್ಲಿ;

**21. ಸದಸ್ಯರನ್ನು ತೆಗೆದು ಹಾಕುವುದು:**

i. ಸಮಿತಿಯ ಉದ್ದೇಶಗಳಿಗೆ ವಿರುದ್ಧವಾಗಿ ನಡೆದು ಕೊಳ್ಳುವುದು ಅಥವಾ ದುರ್ನಡತೆ ಎಸಗಿದಾಗ ಸದಸ್ಯರಿಂದ ಲಿಖಿತ ರೂಪದಲ್ಲಿ ಸಮಜಾಯಿಷಿಯನ್ನು ಕೋರಿ ಆ ಮೂಲಕ ಮುನ್ನೆಚ್ಚರಿಕೆಗಳನ್ನು ನೀಡಿದಾಗ್ಯೂ ಸದಸ್ಯನ ನಡಾವಳಿಗಳಲ್ಲಿ ಬದಲಾವಣೆ ಆಗದಿದ್ದ ಪಕ್ಷದಲ್ಲಿ ಹಾಗೂ ಮಾನಸಿಕ ಅಸ್ವಸ್ಥನೆಂದು ವೈದ್ಯಕೀಯವಾಗಿ ದೃಢಪಟ್ಟಿದ್ದಲ್ಲಿ ಸಮಿತಿಯು, ಮೂರನೇ ಎರಡರಷ್ಟು ಸದಸ್ಯರ ಬಹುಮತದಲ್ಲಿ ಅಂತಹ ಸದಸ್ಯರ ಸದಸ್ಯತನವನ್ನು ರದ್ದುಗೊಳಿಸಬಹುದು. ಸದಸ್ಯತ್ವ ರದ್ದುಗೊಂಡ ಸದಸ್ಯನು ಈ ಸಂಬಂಧ ಯಾವುದೇ ಅಹವಾಲುಗಳಿದ್ದಲ್ಲಿ 30 ದಿನಗಳೊಳಗೆ ಗ್ರಾಮ ಪಂಚಾಯಿತಿಗೆ ಸಕಾರಣಗಳೊಂದಿಗೆ ಲಿಖಿತ ಅರ್ಜಿಯನ್ನು ಸಲ್ಲಿಸಬಹುದು. ಗ್ರಾಮ ಪಂಚಾಯಿತಿಯು ಸಾಮಾನ್ಯ ಬಹುಮತದ ಮೂಲಕ ಅಂತಹ ಸದಸ್ಯರ ಅಹವಾಲನ್ನು ಪರಿಶೀಲಿಸಿ, ಸದಸ್ಯತನವನ್ನು ಪುನರ್ ನೇಮಕ ಮಾಡಬಹುದು ಅಥವಾ ರದ್ದುಗೊಳಿಸುವುದು.

**22. ಆಕಸ್ಮಿಕ ಖಾಲಿಸ್ಥಾನಗಳನ್ನು ತುಂಬುವುದು:**

i. ಯಾವುದೇ ಸದಸ್ಯರ ಸ್ಥಾನವು ಆಕೆಯ/ಆತನ ಪದಾವಧಿಯು ಸಾಮಾನ್ಯ ಕ್ರಮದಲ್ಲಿ ಮುಕ್ತಾಯಗೊಳ್ಳುವ ಮೊದಲೇ ಖಾಲಿಯಾದಲ್ಲಿ, ತತ್ಪರಿಣಾಮವಾಗಿ ಉಂಟಾಗುವ ಆ ಆಕಸ್ಮಿಕ ಖಾಲಿ ಸ್ಥಾನವನ್ನು ಸಮಿತಿಯು ತನ್ನ ಸಭೆಯಲ್ಲಿ ಒಬ್ಬರನ್ನು ಆ ಸ್ಥಾನಕ್ಕೆ ತುಂಬಬಹುದು.

ಪರಂತು, ಸಮಿತಿಯು ಈ ಉಪವಿಧಿಗಳ ಖಂಡ 16 ರ ಮೇರೆಗೆ ಸಂಪೂರ್ಣವಾಗಿ ವಿಸರ್ಜನೆಯಾಗಿದ್ದಲ್ಲಿ ಖಂಡ 16 ರ ಮೇರೆಗೆ ಗೊತ್ತುಪಡಿಸಿದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

ii. ಮೇಲಿನ (i) ಖಂಡದ ಮೇರೆಗೆ ನೇಮಕಗೊಂಡ ಸದಸ್ಯನ ಪದಾವಧಿಯು ಸಮಿತಿಯ ಉಳಿದ ಅವಧಿಗೆ ಅಥವಾ 20 ನೇ ಖಂಡದ ಪ್ರಕಾರ ಆತ/ಆಕೆ ಸದಸ್ಯನಾಗಿರುವುದು ಮುಕ್ತಾಯವಾಗುವವರೆಗೆ ಇವುಗಳಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಇರುವುದು.

**23. ಅಧಿಕೃತ ಸಂವಹನ ಮತ್ತು ಒಪ್ಪಂದಗಳು:**

ಅ) ಕಾರ್ಯದರ್ಶಿಯು ಸಮಿತಿಯ ಪೂರ್ವಾನುಮೋದನೆಯನ್ನು ಪಡೆದು ಉಪವಿಧಿಯ 9ನೇ ಖಂಡದಲ್ಲಿ ನಿರ್ದಿಷ್ಟಪಡಿಸದ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಸಮಿತಿಯ ಪರವಾಗಿ ಲಿಖಿತ ಒಪ್ಪಂದಗಳನ್ನು ಮಾಡಿಕೊಳ್ಳತಕ್ಕದ್ದು.

ಆ) ಸಮಿತಿಯ ಎಲ್ಲಾ ಅಧಿಕೃತ ಪತ್ರಗಳನ್ನು ಕಾರ್ಯದರ್ಶಿಯು ಸಹಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಬಿ. ನವೀನ್ ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, (ಗ್ರಾ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**PR-78**

## DEPARTMENT OF HIGHER EDUCATION, GOVERNMENT OF KARNATAKA

## NOTIFICATION

**No. ED 106 URC 2019, Dated: 18-12-2019**

In exercise of the powers conferred by sub-section (1) of section 61 of the Vydehi University Act-2013 (Karnataka Act No.36 of 2013), the Government of Karnataka hereby makes the following rules, namely:-

**1. Title and commencement-** (1) These rules may be called the Vydehi University Rules, 2019.

(2) They shall come into force with effect from the date of their publication in the official Gezette.

**2. Definitions.-** In this Rules, unless the context otherwise requires-

(a) "Act" means the Vydehi University Act, 2013 (Karnataka Act No.36 of 2013);
(b) "Section" means section of the Act;
(c) "Council" means the Karnataka State Higher Education Council;